
# ರಜತವರ್ಷದ ಸಂಭ್ರಮದಲ್ಲಿ ಆರ್.ಎಲ್.ಜಾಲಪ್ಪ ಆಸ್ಪತ್ರೆ




ಕೋಲಾರ ಅ ೧೮

ನಗರದ ಟಮಕ ಬಡಾವಣೆಯಲ್ಲಿ ೧೯೯೪ರಲ್ಲಿ ೩೫೦ ಹಾಸಿಗೆಗಳೊಂದಿಗೆ ಆರಂಭವಾದ ಆರ್.ಎಲ್. ಜಾಲಪ್ಪ ಆಸ್ಪತ್ರೆ ಈಗ ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದು, ಹಾಲಿ ೧೨೦೦ ಹಾಸಿಗೆಗಳನ್ನು ಹೊಂದಿದೆ.

ಆಸ್ಪತ್ರೆಯಲ್ಲಿ ಎಲ್ಲ ರೀತಿ ಉನ್ನತಮಟ್ಟದ ವೈದ್ಯಕೀಯ ಸೌಲಭ್ಯ ಲಭಿಸುತ್ತಿದ್ದು, ಹೊಸದಾಗಿ ತುರ್ತು ಚಿಕಿತ್ಸೆ ಕೇಂದ್ರವನ್ನು ಸ್ಥಾಪಿಸಿದ್ದು, ಅಲ್ಲಿ ೧೨ ಅಧುನಿಕ ಶಸ್ತ್ರ ಚಿಕಿತ್ಸಾಗಾರ, ೨೨ ಡಯಾಲಿಸಿಸ್ ಯಂತ್ರಗಳು, ೩೬ ವಯಸ್ಕರು ಹಾಗೂ ೩೫ ಮಕ್ಕಳ ತುರ್ತು ಚಿಕಿತ್ಸಾ ವ್ಯವಸ್ಥೆ ಕಲ್ಪಿಸಲಾಗಿದೆ.

ತೆರೆದ ಹೃದ್ರೋಗ ಶಸ್ತ್ರ ಚಿಕಿತ್ಸೆ ಹಾಗೂ ದಿನದ ೨೪ ಘಂಟೆಯೂ ಹೃದ್ರೋಗ ಪರಿಶೀಲನೆ ನಡೆಸುವ ಹೃದ್ರೋಗ ಕೇಂದ್ರ ಕಳೆದ ೧೦ ವರ್ಷಗಳಿಂದ ನಡೆದುಕೊಂಡು ಬರುತ್ತದೆ. ಸಾಮಾನ್ಯ ವಾರ್ಡ್‌ಗಳ ರೋಗಿಗಳಿಗೆ ಉಚಿತ ಊಟ ನೀಡುತ್ತಿದ್ದು ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ.

೨೦೧೮ರ ಅಕ್ಟೋಬರ್ ನಿಂದ ೨೦೧೯ರ ಸೆಪ್ಟೆಂಬರ್‌ವರೆಗೆ ೩೭೮೭೮೬ ಹೊರರೋಗಿಗಳು, ೨೬೮೮೦೪ ಒಳರೋಗಿಗಳು, ೩೭೫೪೬ ಶಸ್ತ್ರಚಿಕಿತ್ಸೆ, ೨೮೫೭ ಹೆರಿಗೆ, ೧೭೭೮೬ ತುರ್ತು ಚಿಕಿತ್ಸೆಯನ್ನು ನೀಡಲಾಗಿದೆ.

ಆಸ್ಪತ್ರೆ ೪೨೪ ಆರೋಗ್ಯ ಶಿಬಿರ ಏರ್ಪಡಿಸಿದ್ದು, ೧೬೭೨೯ ಫಲಾನುಭವಿಗಳಾಗಿದ್ದಾರೆ.

ಕೋಲಾರಪತ್ರಿಕೆ



# ಜಾಲಪ್ಪ ಆಸ್ಪತ್ರೆಯ ರಜತ ಮಹೋತ್ಸವ

ಕೋಲಾರ ಅ ೧೯

ನಗರದ ಹೊರವಲಯದ ಟಮಕದ ಆರ್.ಎಲ್. ಜಾಲಪ್ಪ ಆಸ್ಪತ್ರೆಯ ರಜತ ಮಹೋತ್ಸವ ಇಂದು ಬೆಳಿಗ್ಗೆ ೧೧ ಘಂಟೆಗೆ ದೇವರಾಜ ಅರಸ್ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಕುಲಪತಿ ಡಾ|| ಎಸ್. ಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ರಾಮಯ್ಯ ವಿಶ್ವವಿದ್ಯಾಲಯದ ಪ್ರೋ ಛಾನ್ಸಲರ್ ಡಾ|| ಡಿ.ಸಿ. ಸುಂದರೇಶ್ ಮುಖ್ಯಅತಿಥಿಗಳು.

ಈ ಸಂದರ್ಭದಲ್ಲಿ ಆಸ್ಪತ್ರೆ ಸ್ಥಾಪಕ ಆರ್.ಎಲ್. ಜಾಲಪ್ಪ ಅವರ ೯೫ನೇ ಹುಟ್ಟುಹಬ್ಬವನ್ನು ಆಚರಿಸಲಾಗುವುದು.